# ಸಿ.ಪಿ.ಐ (ಮಾವೋವಾದಿ)
# ಕೇಂದ್ರ ಸಮಿತಿ

**ಇದು ಕಾಮ್ರೇಡ್ ಆಜಾದರ ಇತ್ತೀಚಿನ ಕೊನೆಯ ಪತ್ರಿಕಾ ಪ್ರಕಟಣೆಯ ಅನುವಾದ. ಆಂಧ್ರದ ಪೋಲೀಸರಿಂದ ಹತ್ಯೆಗೀಡಾದ ಕಾಮ್ರೇಡ್ ಆಜಾದ್‌ಗೆ**

## ಲಾಲ್ ಸಲಾಮ್!
## ಕ್ರಾಂತಿ ಚಿರಾಯುವಾಗಲಿ

**ಪತ್ರಿಕಾ ಪ್ರಕಟಣೆ.**

**ಆಳುವ ವರ್ಗಗಳು ಮತ್ತು ಮಾಧ್ಯಮಗಳು ಜ್ಞಾನೇಶ್ವರಿ ರೈಲು ದುರಂತಕ್ಕೆ ಮಾವೋವಾದಿಗಳನ್ನು ಹೊಣೆ ಮಾಡುತ್ತಿರುವ ಸಂಚನ್ನು ವಿರೋಧಿಸೋಣ**

ರೈಲ್ವೆ ಹಳಿಗಳನ್ನು ತೆಗೆದ ಕಾರಣದಿಂದ ಪಶ್ಚಿಮ ಬಂಗಾಳದ ಜಾರ್ಗಮ್‌ನಲ್ಲಿ ಜ್ಞಾನೇಶ್ವರಿ ರೈಲುಗಾಡಿಯು ದುರಂತಕ್ಕೀಡಾಗಿ 150 ಮಂದಿ ಅಮಾಯಕ ನಾಗರೀಕರ ಸಾವು ಮತ್ತು 200ಕ್ಕೂ ಅಧಿಕ ಮಂದಿ ಗಾಯಗೊಂಡಿರುವ ಘಟನೆ ಖಂಡನೀಯ. ಸಿ.ಪಿ.ಐ(ಮಾವೋವಾದಿ) ಕೇಂದ್ರ ಸಮಿತಿ ಈ ದುರ್ಘಟನೆಗೆ ಅಪಾರ ಸಂತಾಪ ವ್ಯಕ್ತ ಪಡಿಸುತ್ತದೆ ಮತ್ತು ಸತ್ತ ಕುಟುಂಬಗಳ ದುಃಖದಲ್ಲಿ ಭಾಗಿಯಾಗುತ್ತದೆ. ಅಚ್ಚರಿಯಂತೆ, ಮೆ 28/29ರ ರಾತ್ರಿ ನಡೆದ ಈ ದುರ್ಘಟನೆಯನ್ನು ಪಶ್ಚಿಮ ಬಂಗಾಳದ ಸರಕಾರ, ಪೋಲೀಸ್ ಮತ್ತು ಆಳುವ ಪಕ್ಷಗಳು, ಹಿಂದೂ ಫ್ಯಾಸಿಸ್ಟ್ ಬಿಜೆಪಿ ಮತ್ತು ಸಾಮಾಜಿಕ ಫ್ಯಾಸಿಸ್ಟ್ ಸಿ.ಪಿ.ಐ[ಎಂ] ನಮ್ಮ ಪಕ್ಷದ ಗುರುತನ್ನು ಹಾಳು ಮಾಡಲು ಉಪಯೋಗಿಸುತ್ತಿದ್ದಾರೆ ಮತ್ತು ದೇಶದ ಬಡ ಜನರ ಮೇಲೆ ನಡೆಸುತ್ತಿರುವ ಯುದ್ಧಕ್ಕೆ ಒಂದು ಅರ್ಥ ಕೊಡಲು ಪ್ರಯತ್ನಿಸುತ್ತಿದ್ದಾರೆ.

ಮಾವೋವಾದಿಗಳ ಮೇಲೆ ಮಾಡಿರುವ ಈ ಆಧಾರರಹಿತ ಆರೋಪಗಳು ಆಳುವ ವರ್ಗಗಳು ಪೋಲೀಸ್, ಗುಪ್ತಚರ ಇಲಾಖೆ ಮತ್ತವರ ಪ್ರೀತಿಪಾತ್ರ ಮಾಧ್ಯಮಗಳ ಮುಖಾಂತರ ಮಾಡುತ್ತಿರುವ ಕೊಳಕು ಪ್ರಚಾರದ ಭಾಗವಾಗಿದೆ. ಮಾವೋವಾದಿ ಕ್ರಾಂತಿಕಾಕಾರಿಗಳು ಅಥವಾ ಪಿ.ಸಿ.ಎ.ಪಿ.ಎದ ಸದಸ್ಯರು ಈ ಘಟನೆಯಲ್ಲಿ ಭಾಗಿಯಾಗಿರುವ ಬಗ್ಗೆ ಪೋಲೀಸರಿಗಿ ಮಾಹಿತಿ ದೊರಕುವುದಿರಲಿ, ಘಟನೆ ನಡೆದು ಎರಡು ದಿನಗಳಾದರೂ ಪೋಲೀಸರಿಗೆ ಘಟನೆ ನಡೆದ ಜಾಗದಲ್ಲಿ ಸ್ಫೋಟ ನಡೆದಿತ್ತೇ ಎಂಬುದನ್ನೇ ತಿಳಿಯಲಾಗಲಿಲ್ಲ. ಆದರೂ ಮಾವೋವಾದಿಗಳು ಈ ಘಟನೆಯಲ್ಲಿ ಭಾಗಿಯಾದ್ದಾರೆ ಎಂಬ ಕಲ್ಪಿತ ಸುದ್ದಿಯನ್ನು ಹರಡುತ್ತಾ ಅದು ಮಾವೋವಾದಿಗಳ ಪ್ರಾಬಲ್ಯವಿರುವ ಪ್ರದೇಶ ಎಂದು ನೆಪ ನುಡಿದರು ಮತ್ತು ಮಾವೋವಾದಿಗಳು ರೈಲುಗಳನ್ನು ಬಹಳ ದಿನಗಳಿದ ಗುರಿಯಾಗಿಸಿಕೊಂಡಿದ್ದಾರೆ ಎಂದು ಹೇಳಿಕೆ ನೀಡಿದರು. ಸಂಪೂರ್ಣ ಮಾಧ್ಯಮ ಪ್ರಪಂಚ ಆಳುವ ವರ್ಗದವರ ತಾಳಕ್ಕೆ ಕುಣಿಯುತ್ತಾ 'ಮಾವೋ ಉಗ್ರರು' ಅಮಾಯಕ ಜನರ ಪ್ರಾಣಹರಣ ಮಾಡಿದರು, ಅವರು ರಕ್ತದಾಹಿಗಳು – ಹೀಗೆ ಅಸ್ತವ್ಯಸ್ತ ಮನಸ್ಸಿನ ಜನರಂತೆ ಬಡಬಡಿಸಿದರು. ನಾಲ್ಕು ದಶಕಗಳಿಂದ ಭೂಮಿ, ಜೀವನ ಮತ್ತು ಜನರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಸಿ.ಪಿ.ಐ(ಮಾವೋವಾದಿ) ಪಕ್ಷ, ಈ ಹೋರಾಟದಲ್ಲಿ ತನ್ನ ಸಾವಿರಾರು ಕಾಮ್ರೇಡ್‌ಗಳನ್ನು ಶೋಷಿತರ ಮುಕ್ತಿಗಾಗಿ ತ್ಯಾಗ ಮಾಡಿದ ಪಕ್ಷ, ಜನರ ಏಳಿಗೆಯಲ್ಲಷ್ಟೇ ಆಸಕ್ತಿಯಿರುವ ಪಕ್ಷ ಅದೇ ಜನರಿಗೆ ಹಾನಿಯುಂಟುಮಾಡುವುದು ಸಾಧ್ಯವೇ?

ದೇಶದ ಆಳುವ ವರ್ಗಗಳು ಕುರ್ಚಿಗಾಗಿ ಏನು ಮಾಡಲೂ ಹೇಸದವರು. ಜನರ ಅನುಕಂಪ ಗಳಿಸಲು ತಮ್ಮ ಮನೆಗೇ ಬೆಂಕಿ ಹಚ್ಚಲೂ ಹಿಂಜರಿಯದವರು ಅವರು. ವಿ.ಹೆಚ್.ಪಿ, ಆರ್.ಎಸ್.ಎಸ್, ಮತ್ತು ಬಜರಂಗದಳದ ಗೂಂಡಾಗಳನ್ನು ಉಪಯೋಗಿಸಿಕೊಂಡು ಮುಸ್ಲಿಮರ ಮೇಲೆ ಹಿಂದೂ ಫ್ಯಾಸಿಸ್ಟ್ ನರೇಂದ್ರ ಮೋದಿ ನಡೆಸಿದ ದುರಾಚಾರ ಎಲ್ಲರಿಗೂ ಗೊತ್ತಿರುವಂಥದ್ದೇ; ಹಣಕ್ಕಾಗಿ ಕರ್ನಾಟಕದಲ್ಲಿ ಶ್ರೀರಾಮ ಸೇನೆ ನಡೆಸಿದ ಗಲಭೆಗಳು; ಆದಿವಾಸಿಗಳನ್ನು ಕೊಂದ ರಮಣ್ ಸಿಂಗ್ ಅದನ್ನು ಹೇಗೆ ಮಾವೋವಾದಿಗಳ ಕೃತ್ಯವೆಂದು ಹೇಳಿದ್ದು. ಫ್ಯಾಸಿಸ್ಟ್ ಹಿಟ್ಲರ್ ರೀಚ್‌ಸ್ಟಾಗ್‌ಗೆ ಬೆಂಕಿ ಹಚ್ಚಿ ಅದು ಕಮ್ಯುನಿಸ್ಟರ ಕೆಲಸವೆಂದು ಆರೋಪಿಸಿ ಅವರನ್ನು ಹತ್ಯೆಗೈಯಲು ಪ್ರಾರಂಭಿಸಿದ. ಅದೇ ರೀತಿ ಈ ಆಳುವ ವರ್ಗದವರು ಮಾವೋವಾದಿಗಳ ಹೆಸರಿಗೆ ಮಸಿ ಬಳಿಯಲು ತಾವೇ ಈ

ರೈಲು ದುರಂತವನ್ನು ಆಯೋಜಿಸಿರುತ್ತಾರೆ. ತಮ್ಮ ಸಾಮಾಜಿಕ ತಳಹದಿ ಅಲುಗಾಡುತ್ತಿರುವ ಭೀತಿಯಲ್ಲಿರುವ ಫ್ಯಾಸಿಸ್ಟರು, ಮುಂದಿನ ಚುನಾವಣೆಯನ್ನು ಗಮನದಲ್ಲಿರಿಸಿಕೊಂಡು ಜನರ ಅನುಕಂಪಗಳಿಸಬಹುದೆಂಬ ಭಾವನೆಯಿಂದ ಈ ಕೊಳಕು ಕೆಲಸಕ್ಕೆ ಕೈಹಾಕಿದ್ದಾರೆ. ಆಳುವ ವರ್ಗ ಯಾವ ಮಟ್ಟಕ್ಕೆ ಅಧಃಪತನಗೊಂಡಿದೆಯೆಂದರೆ ಅಧಿಕಾರಕ್ಕೋಸ್ಕರ ಯಾವ ಕೀಳು ಕೆಲಸವನ್ನು ಬೇಕಾದರೂ ಮಾಡುತ್ತಾರೆ.

ಬಹುತೇಕ ಮಾಧ್ಯಮಗಳು ಈ ಘಟನೆಯನ್ನು ವರದಿ ಮಾಡಿದ ರೀತಿ ಅಚ್ಚರಿ ಮೂಡಿಸುತ್ತೆ. ಮುಖ್ಯಾಂಶಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಮಾವೋವಾದಿಗಳೇ ಈ ಘಟನೆಗೆ ಕಾರಣ ಎಂದು ವರದಿ ಮಾಡಿದ ಮಾಧ್ಯಮಗಳು, ತಮ್ಮ ಇತರ ಅಂಕಣಗಳಲ್ಲಿ ತನಿಖೆ ನಡೆಯುತ್ತಿದೆ ಮತ್ತು ಮಾವೋವಾದಿಗಳ ಭಾಗವಹಿಸುವಿಕೆಯ ಬಗ್ಗೆ ಅನುಮಾನವಿದೆ ಎಂದು ವರದಿ ಮಾಡುತ್ತವೆ. ಯಾವುದೇ ಆಧಾರ ಸಿಗದೇ ಇದ್ದಾಗ್ಯೂ ಮಾಧ್ಯಮಗಳು ತಮ್ಮ ತೀರ್ಪನ್ನು ಹೇಗೆ ನೀಡಿದವು? ಇನ್ನೂ ದುರಂತದ ಸಂಗತಿಯೆಂದರೆ, ಕೆಲವು ಮಾಧ್ಯಮಗಳು ಪಶ್ಚಿಮ ಬಂಗಾಳದ ನಮ್ಮ ಪಕ್ಷದ ವಕ್ತಾರ ಈ ಘಟನೆಯಲ್ಲಿ ನಾವು ಭಾಗವಹಿಸಿಲ್ಲ ಎಂದು ಬಿಡುಗಡೆ ಮಾಡಿದ್ದ ಹೇಳಿಕೆಯನ್ನೂ ಪ್ರಕಟಿಸಲೇ ಇಲ್ಲ. ಮಾಧ್ಯಮ ದಿನ ದಿನಕ್ಕೂ ಹೆಚ್ಚು ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ. ಯಾವುದೇ ತನಿಖೆ ಮಾಡದೆ ಸುಳ್ಳು ಪ್ರಚಾರಗಳನ್ನು ಮಾಡಿದ ಮಾಧ್ಯಮಗಳು ಸತ್ಯ ಹೊರಬಂದಾಗ ತಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವ ಸೌಜನ್ಯವನ್ನೂ ತೋರಿಸಲಿಲ್ಲ. ಈ ರೀತಿಯ ತಪ್ಪು ಮತ್ತು ಕಪೋಲ ಕಲ್ಪಿತ ವರದಿಗಳನ್ನು ಮುಸ್ಲಿಮರ ವಿರುದ್ಧ ಹೈದರಾಬಾದಿನ ಮೆಕ್ಕಾ ಮಸ್ಜೀದಿನಲ್ಲಾದ ಬಾಂಬ್ ಸ್ಫೋಟ, ಅಜ್ಮೀರ್ ದರ್ಗಾ ಬಾಂಬ್ ಸ್ಫೋಟ ನಡೆದ ಸಂದರ್ಭಗಳಲ್ಲೂ ಮಾಡಿದ್ದರು ಮತ್ತು ಈ ಘಟನೆಗಳು ಹಿಂದೂ ಫ್ಯಾಸಿಸ್ಟರ ಕೆಲಸ ಎಂಬುದು ತಿಳಿದ ಮೇಲೂ ಕ್ಷಮಾಪಣೆ ಕೇಳಲಿಲ್ಲ.

ಕೇಂದ್ರ ಸಮಿತಿ, ಸಿ.ಪಿ.ಐ(ಮಾವೋವಾದಿ) ಮಾಧ್ಯಮಗಳ ಈ ವರ್ತನೆಯನ್ನು ಮತ್ತವರ ಬೇಜವಾಬ್ದಾರಿತನವನ್ನು ಖಂಡಿಸುತ್ತದೆ. ಈ ಘಟನೆ ದೇಶದ ಆಳುವ ವರ್ಗಗಳು ನಮ್ಮ ವಿರುದ್ಧ ನಡೆಸಿದ ಪಿತೂರಿ ಮತ್ತು ಜನರ ಹೋರಾಟವನ್ನು ಹೊಸಕಿಹಾಕಲು ಸೃಷ್ಟಿಸಿದ ನೆಪ ಎಂದು ನಮ್ಮ ಪಕ್ಷ ಪರಿಗಣಿಸುತ್ತದೆ. ಮಾವೋವಾದಿಗಳ ವಿರುದ್ಧ ವಿಷಕಾರುತ್ತಿರುವ ಜನರಿಗೆ ಈ ರೀತಿಯ ತಪ್ಪು ಆರೋಪಗಳನ್ನು ಹೊರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ.ಎಲ್ಲಾ ಪ್ರಜಾಪ್ರಭುತ್ವ ಮಾನವ ಹಕ್ಕು ಸಂಘಗಳು ಮತ್ತು ಜನರು ಆಳುವ ವರ್ಗಗಳ ಈ ತಂತ್ರಗಳನ್ನು ಪರಿಶೀಲಿಸಬೇಕೆಂದು ಈ ಮೂಲಕ ಮನವಿ ಮಾಡುತ್ತೇವೆ. ಸತ್ಯ ಹೊರಬರಲು ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಆಗ್ರಹಿಸುತ್ತೇವೆ. ನಮ್ಮ ಪಕ್ಷ ಎಂದೂ ಜನರಿಂದ ಸತ್ಯ ಮರೆಮಾಚುವುದಿಲ್ಲ. ನಾವು ತಪ್ಪು ಮಾಡಿದಾಗ ಬಹಿರಂಗವಾಗಿ ಹೃದಯದಾಳದಿಂದ ಜನರ ಬಳಿ ಕ್ಷಮೆಯಾಚಿಸಿ ಮತ್ತೆ ಆ ರೀತಿಯ ತಪ್ಪುಗಳಾಗದಂತೆ ಎಚ್ಚರ ವಹಿಸುತ್ತೇವೆ. ಇದು ನಮ್ಮ ಪಕ್ಷದ ಇತಿಹಾಸದ ಹೆಗ್ಗುರುತು. ಜ್ಞಾನೇಶ್ವರಿ ರೈಲು ದುರಂತದಲ್ಲಿ ಇಲ್ಲಿಯವರೆಗೂ ಪಕ್ಷದ ನಾಯಕರಿಗೆ ತನ್ನ ಕಾರ್ಯಕರ್ತರು ಭಾಗವಹಿಸಿರುವ ಬಗ್ಗೆ ಮಾಹಿತಿಯಿಲ್ಲ. ಆದರೂ ಪಕ್ಷಕ್ಕೆ ಸಂಬಂಧಿಸಿದ ಯಾರಾದರೂ ಇದರಲ್ಲಿ ಭಾಗವಹಿಸಿದ್ದ ಪಕ್ಷದಲ್ಲಿ ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಮತ್ತದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲಾಗುವುದು. ನಾವು ಇದರ ಬಗ್ಗೆ ಸ್ವತಂತ್ರ್ಯ ತನಿಖೆ ನಡೆಸುತ್ತೇವೆ.

**01/06/2010**

**ಆಜಾದ್.**
**ಕೇಂದ್ರ ಸಮಿತಿ,**
**ಸಿ.ಪಿ.ಐ(ಮಾವೋವಾದಿ).**